ಮೈಸೂರಿನಲ್ಲಿ ಕ್ರೀಡಾಂಗಣದ ನಿರ್ಮಾಣ

೭೮ ಶ್ರೀಮತಿ ಮುಖ್ತಾರುನ್ನೀಸ (ನರಸಿಂಹರಾಜ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಮೈಸೂರಿನಲ್ಲಿ ಕ್ರೀಡಾಂಗಣ ಕಟ್ಟಲು ಎಷ್ಟು ಹಣ ನಿಗಧಿಪಡಿಸಿದೆ ?

ಆ) ಕ್ರೀಡಾಂಗಣದ ವಿಸ್ತೀರ್ಣ

ಇ) ೧೯೮೬ನೇ ಸಾಲಿನ ದಸರ ಮಹೋತ್ಸವಕ್ಕೆ ಮುಂಚೆ ಮೈಸೂರಿನ ಕ್ರೀಡಾಂಗಣವನ್ನು ಪೂರ್ಣಗೊಳಿಸುವುದಾಗಿ ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಸದನದಲ್ಲಿ ಆಶ್ವಾಸನೆ ನೀಡಿರುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಯವರು).—

ಅ) ರಾಜ್ಯ ಸರ್ಕಾರದಿಂದ ಈ ಕೆಲಸಕ್ಕೆ ೧೪.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ನಿಗಧಿ ಮಾಡಿದೆ.

ಆ) ೨೦ ಎಕರೆ

ಇ) ಹೌದು

ಈ) ಈ ಕೆಲಸಕ್ಕೆ ಈಗಾಗಲೇ ೧೩.೦೫ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಮೈಸೂರು ಆಟದ ಕ್ರೀಡಾಂಗಣದ ಕೆಲಸದ ಮುಕ್ತಾಯವು ಸಾರ್ವಜನಿಕರ ವಂತಿಕೆಯ ಮೇಲೆ ಅವಲಂಭಿಸಿದೆ. ಆದಷ್ಟು ಬೇಗ ಈ ಕ್ರೀಡಾಂಗಣದ ನಿರ್ಮಾಣದ ಕಾರ್ಯವನ್ನು ಪೂರ್ತಿಗೊಳಿಸಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಮೈಸೂರಿನಲ್ಲಿ ಕಲಾ ಮಂದಿರದ ನಿರ್ಮಾಣ

೨೭೯ ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ವಿಶ್ವಕನ್ನಡ ಸಮ್ಮೇಳನ ಸಂದರ್ಭದಲ್ಲಿ ಪ್ರಧಾನಿಯವರಿಂದ ಉದ್ಘಾಟಣೆ ಮಾಡಿಸಿದ ಮೈಸೂರಿನ ಕಲಾಮಂದಿರದ ನಿರ್ಮಾಣಕ್ಕೆ ಖರ್ಚಾದ ಒಟ್ಟು ಹಣ ಎಷ್ಟು ?

ಆ) ಪ್ರತಿ ತಿಂಗಳು ಕಲಾಮಂದಿರದ ಸಿಬ್ಬಂದಿ ವಿದ್ಯುಚ್ಛಕ್ತಿ ಹಾಗೂ ಇತರೆ ವ್ಯವಸ್ಥೆಗೆ ಎಷ್ಟು ಹಣ ಖರ್ಚಾಗುತ್ತಿದೆ

ಇ) ಈವರೆವಿಗೂ ಏನಾದರೂ ಕಾರ್ಯಕ್ರಮ ನಡೆದಿದೆಯೇ ?

ಈ) ಸದರಿ ಕಲಾಮಂದಿರದಲ್ಲಿ ದಿನಪ್ರೊಂದಕ್ಕೆ ಎಷ್ಟು ಬಾಡಿಗೆ ನಿಗದಿಮಾಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಯವರು).—

ಅ) ಜುಲೈ ೮೬ರ ಅಂತ್ಯಕ್ಕೆ ೩೧೩.೭೩ ಲಕ್ಷ ರೂಗಳನ್ನು ಖರ್ಚು ಮಾಡಲಾಗಿದೆ.

ಆ) ಸಿಬ್ಬಂದಿಗೆ ರೂ. ೮,೫೦೦-೦೦

ವಿದ್ಯುಚ್ಛಕ್ತಿಗೆ ರೂ. ೨೫,೦೦೦-೦೦

ಒಟ್ಟು ೩೩,೫೦೦-೦೦

ಇ) ಹೌದು

ಈ) ದಿನವೊಂದಕ್ಕೆ ರೂ ೨,೫೦೦-೦೦ ಬಾಡಿಗೆ ಹಾಗೂ ರೂ. ೧,೦೦೦-೦೦ ವಿದ್ಯುಚ್ಛಕ್ತಿ ಮತ್ತಿತರ ನಿರ್ವಹಣಾ ವೆಚ್ಚವನ್ನು ತಾತ್ಕಾಲಿಕವಾಗಿ ನಿಗದಿ ಮಾಡಲಾಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ ಪ್ರಶ್ನೋತ್ತರ ವೇಳೆಯನ್ನು ಏತಕ್ಕೆ ಮುಗಿಸುತ್ತಿದ್ದೀರಿ ?

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ರಾಮಕೃಷ್ಣ ಹೆಗಡೆ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಹರಪನಹಳ್ಳಿ ತಾಲ್ಲೂಕ ಕಂಬತ್ತನ ಹಳ್ಳಿಯಲ್ಲಿ ಇರುವ ಮದ್ಯಪಾನ ಗೃಹ ರದ್ದು ಮಾಡುವ ಬಗ್ಗೆ

೩೬೧. ಶ್ರೀ ಬಿ. ಹೆಜ್. ಯಂಕಾನಾಯಕ (ಹರಪನಹಳ್ಳಿ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕು ಕಂಬತ್ತನಹಳ್ಳಿಯಲ್ಲಿರುವ ಮರುಳಂ ಸಿದ್ದೇಶ್ವರ ವೈನ್ ಶಾಪು ಕಾನೂನಿನ ರೀತ್ಯ ನಿಷಿದ್ಧ ಸ್ಥಳದಲ್ಲಿ ಸ್ಥಾಪಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಪಾನಗೃಹವನ್ನು ಸ್ಥಳಾಂತರಿಸಲು ಕೈಗೊಳ್ಳಲಾಗಿದೆಯೇ ?

ಶ್ರೀ ಹೆಚ್.ಡಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಅಬಕಾರಿ ಸಚಿವರು).—

ಅ) ಬಂದಿದೆ.

ಆ) ಈ ದೂರಿನ ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳು ನಿಜವೆಂದು ಕಂಡು ಬಂದಲ್ಲಿ ಸದರಿ ವೈನ್ ಷಾಪ್‌ನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಎಲ್ಲಾ ಬಾಬ್ತುಗಳಿಂದ ಬಂದಿರುವ ಒಟ್ಟು ಆದಾಯ ಹಾಗೂ ರಾಜ್ಯ ಸರ್ಕಾರಿ ನೌಕರರಿಗೆ ಖರ್ಚು ಮಾಡಿರುವ ಹಣದ ಮೊತ್ತದ ಬಗ್ಗೆ

೩೬೨. ಶ್ರೀ ಸಿ. ಭೈರೇಗೌಡ (ವೇಮಗಲ್).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ನೇ ಸಾಲುಗಳಲ್ಲಿ ರಾಜ್ಯದ ಎಲ್ಲಾ ಬಾಬ್ತುಗಳಿಂದ ಬಂದಿರುವ ಸಾಲಿಯಾನ ಒಟ್ಟು ಆದಾಯವೆಷ್ಟು ?

ಆ) ಇದರಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ವೇತನ, ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ನಗರ ಸಾರಿಗೆ ಭತ್ಯೆ, ಪ್ರಯಾಣ ಭತ್ಯೆ ಇತ್ಯಾದಿ ಬಾಬ್ತುಗಳಿಗೆ ಪ್ರತಿ ಸಾಲಿಯಾನ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು ?